# ಶ್ರೀರಾಮಕೃಷ್ಣ ಮತ್ತು ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಧರ್ಮಸಮನ್ವಯ

**ಸ್ವಾಮಿ ಭಜನಾನಂದ**

**(ಹಿಂದಿನ ಸಂಚಿಕೆಯಿಂದ)**

### ಹಿಂದಿನ ಸಂಚಿಕೆಯಲ್ಲಿ

ವೈದಿಕ ಯುಗದ ನಂತರ ಬಹುತ್ವ ಭಾವನೆಯು ನಷ್ಟವಾಯಿತೆಂಬುದು ಸುಸ್ಪಷ್ಟ. ಆಧುನಿಕ ಕಾಲದಲ್ಲಿ ಪಾಶ್ಚಾತ್ಯರ ಸಂಪರ್ಕದಿಂದ ಸಂದಿಗ್ಧ ಸ್ಥಿತಿ ನಿರ್ಮಾಣವಾಯಿತು. ಆಗ ಮತ್ತೆ ಭಾರತವನ್ನು ಪುನರುಜ್ಜೀವನಗೊಳಿಸಿದ್ದೇ ಶ್ರೀರಾಮಕೃಷ್ಣ ಮತ್ತು ವಿವೇಕಾನಂದರು ಮಾಡಿದ ಮಹಾನ್ ಕಾರ್ಯವಾಗಿದೆ. ಆಧುನಿಕ ಜಗತ್ತಿನಲ್ಲಿ ಧಾರ್ಮಿಕ ಬಹುತ್ವ ಭಾವನೆಯನ್ನು ಪ್ರತಿಪಾದಿಸಿದ ಮೊಟ್ಟಮೊದಲ ಮಹಾನ್ ಪ್ರವಾದಿಯೆಂದರೆ, ಶ್ರೀರಾಮಕೃಷ್ಣ ಪರಮಹಂಸರು. ವಿಶ್ವಾತ್ಮಕತೆಯು ಧರ್ಮಗಳ ನಡುವಣ ಸಮಾನ ಭೂಮಿಕೆಗೆ ಒತ್ತುಕೊಡುತ್ತದೆ. ಶ್ರೀರಾಮಕೃಷ್ಣರ ಧರ್ಮಸಮನ್ವಯ ಸಿದ್ಧಾಂತವು ಅವರು ತಮ್ಮ ಜೀವನದಲ್ಲಿ ಅನುಸರಿಸಿದ ಕೆಲವು ನಿರ್ದಿಷ್ಟ ಸಾಮಾನ್ಯ ನಿಯಮಗಳ ಮೇಲೆ ಆಧಾರಿತವಾಗಿದೆ.

## ಸ್ವಾಮಿ ವಿವೇಕಾನಂದರ ಮೂರು ಪೂರಕ ತತ್ತ್ವಗಳು

ಸ್ವಾಮಿ ವಿವೇಕಾನಂದರು ತಮ್ಮ ಗುರುದೇವರ ಧರ್ಮಸಮನ್ವಯ ಸಂದೇಶವನ್ನು ಪಾಶ್ಚಿಮಾತ್ಯ ಜಗತ್ತಿನಲ್ಲಿ ಹರಡಿದರು. ಇದನ್ನು ಅವರು ಮೊದಲಿಗೆ, ಸುಪ್ರಸಿದ್ಧವಾದ ಷಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ, ತದನಂತರ, ಅಮೆರಿಕ ಮತ್ತು ಇಂಗ್ಲೆಂಡಿನ ವಿವಿಧ ಭಾಗಗಳಲ್ಲಿ ಪ್ರತಿಪಾದಿಸಿದರು. ಹಿಂದೆ ಚರ್ಚಿಸಿದ, ಶ್ರೀರಾಮಕೃಷ್ಣರ ಧರ್ಮ ಸಮನ್ವಯ ಸಿದ್ಧಾಂತಕ್ಕೆ ಅವರು ಮೂರು ಪೂರಕ ತತ್ತ್ವಗಳನ್ನು ಸೇರಿಸಿದರು. ಅವು ಹೀಗಿವೆ:

೧. ಜಗತ್ತಿನ ಧರ್ಮಗಳು ಪರಸ್ಪರ ಪೂರಕವೇ ಹೊರತು ವಿರುದ್ಧವಲ್ಲ.

೨. ಯಾರೊಬ್ಬರೂ ಮತಾಂತರಗೊಳ್ಳುವ ಅಗತ್ಯವಿಲ್ಲ.

೩. ತನ್ನ ಸ್ವಂತ ಧರ್ಮದಲ್ಲಿ ನಿಷ್ಠಾವಂತನಾಗಿದ್ದುಕೊಂಡು, ಇತರ ಧರ್ಮಗಳ ಉತ್ತಮ ಅಂಶಗಳನ್ನು ಒಪ್ಪಿಕೊಂಡು, ಅವುಗಳನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಳ್ಳುವುದೇ ಆದರ್ಶ ಮಾರ್ಗವಾಗಿದೆ.

ಸ್ವಾಮೀಜಿ ಷಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ತಾವು ಮಾಡಿದ ಭಾಷಣದಲ್ಲಿ ಮೇಲಿನ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಅವರು ಹೀಗೆ ಹೇಳುತ್ತಾರೆ: "ಕ್ರೈಸ್ತರು ಹಿಂದುಗಳಾಗಲಿ ಎಂಬುದು ನನ್ನ ಬಯಕೆಯೇ? ಖಂಡಿತ ಅಲ್ಲ. ಹಿಂದುಗಳು, ಬೌದ್ಧರು ಕ್ರಿಸ್ತರಾಗಲಿ ಎಂಬುದು ನನ್ನ ಬಯಕೆಯೇ? ಖಂಡಿತ ಅಲ್ಲ.... ಕ್ರೈಸ್ತ ಹಿಂದು ಅಥವಾ ಬೌದ್ಧನಾಗಬೇಕಾಗಿಲ್ಲ. ಹಿಂದುವಾಗಲಿ ಬೌದ್ಧನಾಗಲಿ ಕ್ರೈಸ್ತನಾಗಬೇಕಾಗಿಲ್ಲ. ಪ್ರತಿಯೊಬ್ಬನೂ ಇತರರ ಮನೋಭಾವವನ್ನು ಗ್ರಹಿಸಬೇಕು. ಆದರೆ ತನ್ನ ವೈಯಕ್ತಿಕತೆಯನ್ನು ಉಳಿಸಿಕೊಂಡು ತನ್ನದೇ ಆದ ಬೆಳವಣಿಗೆಯ ನಿಯಮಗಳಿಗೆ ಅನುಗುಣವಾಗಿ ಬೆಳೆಯಬೇಕು."[೧]

## ಸ್ವಾಮಿ ವಿವೇಕಾನಂದರ ವಿಶ್ವಧರ್ಮ ಪ್ರತಿಪಾದನೆ

ಮೊದಲೇ ಹೇಳಿದಂತೆ, ಸ್ವಾಮಿ ವಿವೇಕಾನಂದರು ಬಹುತ್ವ ಭಾವನೆಯನ್ನು ಒಂದು ಹೆಜ್ಜೆ ಮುಂದಕ್ಕೆ ತೆಗೆದುಕೊಂಡು ಹೋಗಿ, ವಿಶ್ವಾತ್ಮಕತೆಯೆಂಬ ನೂತನ ಕಲ್ಪನೆಯನ್ನು ಹುಟ್ಟುಹಾಕಿದರು. ವಿಶ್ವಧರ್ಮದ ಪರಿಕಲ್ಪನೆಯನ್ನು ಸ್ವಾಮೀಜಿ ಮೊಟ್ಟಮೊದಲು ಪ್ರಸ್ತುತಪಡಿಸಿದ್ದು, ಷಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಮತ್ತು ನಂತರ, ಅವರು ಅಮೆರಿಕ ಮತ್ತು ಇಂಗ್ಲೆಂಡ್‌ಗಳಲ್ಲಿ ನೀಡಿದ ಪ್ರವಚನಗಳಲ್ಲಿ. ಸ್ವಾಮೀಜಿಯವರು 'ವಿಶ್ವಧರ್ಮ' ವೆಂಬ ಪರಿಭಾಷೆಗೆ ಒಂದು ಹೊಸ ಅರ್ಥವನ್ನೇ ಕಲ್ಪಿಸಿದರೆಂಬುದನ್ನು ಗಮನದಲ್ಲಿಡಬೇಕು.

ಸ್ವಾಮಿ ವಿವೇಕಾನಂದರಿಗಿಂತ ಮೊದಲು, ಒಂದು ನಿರ್ದಿಷ್ಟ ದೇಶ, ಜನಾಂಗ ಮತ್ತು ಜಾತಿಗೆ ಸೀಮಿತವಾಗದೆ, ವಿಶ್ವದ ಎಲ್ಲ ಜನರಿಗೆ ಮುಕ್ತ ಪ್ರವೇಶವಿರುವ ಧರ್ಮವನ್ನು 'ವಿಶ್ವಧರ್ಮ'ವೆಂದು ಪರಿಗಣಿಸಲಾಗುತ್ತಿತ್ತು. ಜಾರ್ಜ್ ಗ್ಯಾಲ್ಲೋವೇ ಎಂಬುವವರು ತಮ್ಮ Philosophy of Religion ಎಂಬ ಸುಪ್ರಸಿದ್ಧ ಗ್ರಂಥದಲ್ಲಿ ಬರೆದಿರುವ ಪ್ರಕಾರ ಜಗತ್ತಿನ ಧರ್ಮಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಬಹುದು: ೧.ಜನಾಂಗೀಯ ಧರ್ಮಗಳು ಮತ್ತು ೨. ವಿಶ್ವ ಧರ್ಮಗಳು. ಜನಾಂಗೀಯ ಧರ್ಮಗಳಲ್ಲಿ ಧರ್ಮದ ಸದಸ್ಯತ್ವವು ಜನ್ಮದ ಮೇಲೆ ಆಧಾರಿತವಾಗಿರುತ್ತದೆ. ಒಂದು ನಿರ್ದಿಷ್ಟ ಜನಾಂಗಕ್ಕೆ (ಯಹೂದಿ ಧರ್ಮ, ಪಾರ್ಸಿ ಧರ್ಮ ಮತ್ತು ಶಿಂಟೋ ಧರ್ಮಗಳಲ್ಲಿದ್ದಂತೆ) ಅಥವಾ ಜಾತೀಯ ಶ್ರೇಣಿವ್ಯವಸ್ಥೆಗೆ (ಹಿಂದೂ ಧರ್ಮದಲ್ಲಿದ್ದಂತೆ) ಸೇರಿದವರು ಮಾತ್ರ ಆಯಾ ಧರ್ಮದ ಸದಸ್ಯರಾಗಲು ಸಾಧ್ಯ. ಇದಕ್ಕೆ ವಿರುದ್ಧವಾಗಿ, ಒಂದು ಸರಳ ಆಚರಣೆಯ ಮೂಲಕ ವಿಶ್ವಧರ್ಮಗಳಿಗೆ ಯಾರಾದರೂ ಸೇರಬಹುದು. ಗ್ಯಾಲ್ಲೋವೇ ಪ್ರಕಾರ ವಿಶ್ವಧರ್ಮಗಳಾಗಲು ಅರ್ಹತೆ ಇರುವವು ಮೂರೇ ಧರ್ಮಗಳು. ಅವೆಂದರೆ, ಕ್ರೈಸ್ತ ಧರ್ಮ, ಇಸ್ಲಾಂ ಧರ್ಮ ಮತ್ತು ಬೌದ್ಧ ಧರ್ಮ.

ಆದರೆ ಮೇಲಿನ ಧರ್ಮಗಳಲ್ಲಿ ಪ್ರತಿಯೊಂದು ಧರ್ಮವೂ, ಜಗತ್ತಿನಲ್ಲೆಲ್ಲ ತಾನೆ ನಿಜವಾದ ಧರ್ಮವೆಂದೂ, ಇತರ ಧರ್ಮಗಳು ಅಸತ್ಯವೆಂದೂ ಪರಿಗಣಿಸುತ್ತದೆ. ಈ ಬಗೆಯ ವಾದವು ಧರ್ಮಗಳ ವಿಶ್ವಾತ್ಮಕತೆಗೆ ವಿರುದ್ಧವಾಗಿದೆ. ಒಂದು ಧರ್ಮವು ಇತರ ಧರ್ಮಗಳ ಮೇಲೆ ವಿಜಯ ಸಾಧಿಸುವ ಕಲ್ಪನೆಯೇ ಅಸಂಸ್ಕೃತವಾದದ್ದು ಮತ್ತು ಹಳತಾದದ್ದು. ಇದನ್ನು ವಿಜೇಯತಾ ಭಾವನೆ (Triumphalism) ಎಂದೂ ಕರೆಯುವರು.

ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ವಿಶ್ವಧರ್ಮವೆಂದರೆ, ಒಂದು ಬಗೆಯ ಸಿದ್ಧಾಂತವನ್ನು ಇಡೀ ಮಾನವಕೋಟಿ ನಂಬುವುದು ಎಂದು ಭಾವಿಸಿದ್ದರೆ ಅದು ಎಂದಿಗೂ ಸಾಧ್ಯವಿಲ್ಲ. ಎಲ್ಲ ಮಾತುಗಳೂ ಒಂದೇ ಸಮನಾಗಿರುವ ಕಾಲ ಬರುವುದಿಲ್ಲ. ಒಂದು ಸಾರ್ವತ್ರಿಕ ಪುರಾಣವನ್ನು ನಿರೀಕ್ಷಿಸಿದರೂ ಅದು ಅಸಾಧ್ಯ. ಅದರಂತೆಯೆ ಒಂದು ಸಾರ್ವತ್ರಿಕ ಆಚಾರವೂ ಇರಲಾರದು. ಇಂತಹ ಸ್ಥಿತಿ ಎಂದಿಗೂ ಇರುವುದಿಲ್ಲ. ಇದೇನಾದರೂ ಸಾಧ್ಯವಾದರೆ, ಪ್ರಪಂಚವೇ ನಾಶವಾಗುವುದು. ಏಕೆಂದರೆ ವೈವಿಧ್ಯವೇ ಜೀವನದ ಪ್ರಥಮ ನಿಯಮ." [೨]

ಹಿಂದೆ ಉಲ್ಲೇಖಿಸಿದ ವಿಶ್ವಧರ್ಮದ ಸಂಕುಚಿತ ಕಲ್ಪನೆಗೆ ಹೋಲಿಸಿದಲ್ಲಿ, ಸ್ವಾಮೀಜಿಯವರ ಕಲ್ಪನೆಯು ವಿಶಾಲವಾದ, ನೈಜ ವಿಶ್ವಾತ್ಮಕ ಕಲ್ಪನೆಯಾಗಿದೆ. ಇದು ವಿಶ್ವಾತ್ಮಕ ಕಲ್ಪನೆಗಳನ್ನು ಆಧರಿಸಿದ್ದು, ಧರ್ಮಗಳ ನಡುವಿನ ವ್ಯತ್ಯಾಸಗಳನ್ನು ಸಮನ್ವಯಗೊಳಿಸುತ್ತದೆ. ಆದರೆ, ವಿಶ್ವಧರ್ಮದ ಈ ಮೂರು ಕಲ್ಪನೆಗಳನ್ನು ನಮಗೆ ನೀಡಿದವರೆಂದರೆ ಸ್ವಾಮಿ ವಿವೇಕಾನಂದರು ಎನ್ನುವುದು ಅಷ್ಟೊಂದು ಪ್ರಚುರವಾಗಿಲ್ಲ.

### ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಮೊದಲ ತತ್ತ್ವ

ತಮ್ಮ ಹಲವು ಭಾಷಣಗಳಲ್ಲಿ ಮತ್ತು ಬರಹಗಳಲ್ಲಿ, ಸ್ವಾಮಿ ವಿವೇಕಾನಂದರು ವಿಶ್ವಧರ್ಮವನ್ನು ಮಾನವತೆಯ ಧಾರ್ಮಿಕ ಪ್ರಜ್ಞೆಯನ್ನು ಪ್ರತಿನಿಧಿಸುವ ಒಂದು ಚಿರಂತನ ತತ್ತ್ವವೆಂಬಂತೆ ಪ್ರತಿಪಾದಿಸಿದ್ದಾರೆ. ಈ ಧಾರ್ಮಿಕ ಪ್ರಜ್ಞೆಯೇ ವಿವಿಧ ಧರ್ಮಗಳಾಗಿ ಅಭಿವ್ಯಕ್ತಿ ಹೊಂದಿದೆ. ವಿಜ್ಞಾನ ಒಂದೇ. ಅದೇ ರೀತಿ ಧರ್ಮವೂ ಕೂಡ ಒಂದೇ ಆಗಿದೆ. "ನನ್ನ ಗುರುದೇವ" ಎನ್ನುವ ತಮ್ಮ ಸುವಿಖ್ಯಾತ ಪ್ರವಚನದಲ್ಲಿ, ಸ್ವಾಮೀಜಿಯವರು ಹೀಗೆ ಹೇಳುತ್ತಾರೆ:

> "ನಾನು ಗುರುದೇವನಿಂದ ಕಲಿತ ಬಹುಶಃ ಅತ್ಯಂತ ಮುಖ್ಯವಾದ ಎರಡನೆಯ ಭಾವನೆಯೆ ಇದು: ಧರ್ಮಗಳು ಪರಸ್ಪರ ವಿರೋಧವಲ್ಲ, ಅವೆಲ್ಲ ಒಂದು ಸನಾತನ ಧರ್ಮದ ಹಲವಾರು ಪ್ರತಿಬಿಂಬಗಳು. ಆ ಒಂದು ಸತ್ಯವನ್ನೇ ಕಾರ್ಯಕ್ಷೇತ್ರದ ಹಲವು ಭೂಮಿಕೆಗಳಲ್ಲಿ ಬೇರೆ ಬೇರೆ ಜನಾಂಗದವರಿಗೆ ಅವರವರ ಮನಸ್ಸಿಗೆ ರುಚಿಸುವಂತೆ ಉಪಯೋಗಿಸಿದೆ. ಎಂದಿಗೂ ನನ್ನ ಧರ್ಮ ಅಥವಾ ನಿಮ್ಮ ಧರ್ಮ ಎಂಬುದು ಇರಲಿಲ್ಲ. ನನ್ನ ರಾಷ್ಟ್ರೀಯ ಧರ್ಮ ಅಥವಾ ನಿಮ್ಮ ಧರ್ಮ ಎಂಬುದು ಇರಲಿಲ್ಲ. 'ಹಲವು' ಧರ್ಮಗಳು ಎಂದಿಗೂ ಇರಲಿಲ್ಲ. ಯಾವಾಗಲೂ ಇದ್ದುದು ಒಂದೇ ಧರ್ಮ. ಒಂದು ಸನಾತನ ಧರ್ಮ ಅನಾದಿಕಾಲದಿಂದಲೂ ಬಂದಿದೆ. ಅದೇ ಎಂದೆಂದಿಗೂ ಇರುವುದು. ಈ ಧರ್ಮವೇ ಹಲವು ದೇಶಗಳಲ್ಲಿ ಹಲವು ರೀತಿಗಳಲ್ಲಿ ವ್ಯಕ್ತವಾಗುತ್ತ ಹೋಗುವುದು."[೩]

ಸಮಾಜವಿಜ್ಞಾನಿಗಳು ಧರ್ಮವನ್ನು ಪ್ರಪಂಚದೆಲ್ಲೆಡೆ ಇರುವ ಸಂಸ್ಕೃತಿಭೇದಗಳ ಸಾಮಾನ್ಯ ಸಂಗತಿ ಎಂದು ಪರಿಗಣಿಸುತ್ತಾರೆ ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು. Primitive Cultures ಎನ್ನುವ ತಮ್ಮ ಪುಸ್ತಕದಲ್ಲಿ, ಇ.ಬಿ. ಟೈಲರ್ ಅವರು 'ಅನಾಗರಿಕ ಮನಸ್ಸು', ಪ್ರಾಕೃತಿಕ ಘಟನೆಗಳಾದ ಸಾವು, ವ್ಯಾಧಿಗಳು, ಕನಸುಗಳು ಮುಂತಾದವುಗಳನ್ನು ಅರ್ಥಮಾಡಿಕೊಳ್ಳಲು ನಡೆಸಿದ ಪ್ರಯತ್ನವೇ ಧರ್ಮ ಎಂದು ಅಭಿಪ್ರಾಯಪಡುತ್ತಾರೆ. ಬ್ರೊನಿಸ್ಲಾ ಮಲಿನೋವ್ಸ್ಕಿ, ಕ್ಲಾಡ್ ಲೆವಿ ಸ್ಟ್ರಾಸ್ ಮತ್ತಿತರರು, ಜೀವನದಲ್ಲಿ ಅರ್ಥವನ್ನು ಕಂಡುಕೊಳ್ಳಲು ಮಾನವನು ನಡೆಸುವ ಯತ್ನವೇ ಧರ್ಮ ಎಂದು ಎತ್ತಿ ತೋರಿಸಿದ್ದಾರೆ. ಜಾರ್ಜ್ ಸಿಮೆಲ್ ಮತ್ತು ಎಮಿಲಿ ಡರ್ಕೆಯಿಮ್ ಒಂದು ಸಿದ್ಧಾಂತವನ್ನು ಅಭಿವೃದ್ಧಿ ಪಡಿಸಿದ್ದಾರೆ. ಅದರಂತೆ, ಧರ್ಮವೆಂದರೆ, ಮಾನವ ಸಂಬಂಧಗಳನ್ನು ಪವಿತ್ರಗೊಳಿಸುವ ಪ್ರಯತ್ನ.

ಸಮಾಜವಿಜ್ಞಾನಿಗಳು ಧರ್ಮವನ್ನು ಒಂದು ವಿಶ್ವಾತ್ಮಕ ಸಂಗತಿಯೆಂದು ಪರಿಗಣಿಸಿದ್ದಾರೇನೋ ನಿಜ. ಆದರೆ ಧರ್ಮದ ಬಗೆಗಿನ ಅವರ ಕಲ್ಪನೆ ಬಹಳ ಕೆಳಮಟ್ಟದ್ದು. ಅದು ಪೌರಾಣಿಕತೆ, ಆಚರಣೆಗಳು, ಧಾರ್ಮಿಕ ಸಂಸ್ಥೆಗಳು – ಇವುಗಳ ಮೇಲೆಯೇ ಆಧಾರಿತವಾಗಿದೆ. ಸ್ವಾಮಿ ವಿವೇಕಾನಂದರು ಧರ್ಮವೆಂದರೆ ವಿಶ್ವಾತ್ಮಕ ಪ್ರಕ್ರಿಯೆ ಎನ್ನುವ ಉನ್ನತ ಕಲ್ಪನೆಯನ್ನು ನಮಗೆ ಕೊಟ್ಟಿದ್ದಾರೆ. ಅವರು ಧರ್ಮವನ್ನು ಅತೀಂದ್ರಿಯ ಆಧ್ಯಾತ್ಮಿಕ ಪ್ರಜ್ಞೆಯೆಂದೂ, ಮಾನವನು ಆ ಪ್ರಜ್ಞೆಯನ್ನು ಗಳಿಸುವ ಹಾದಿಯಲ್ಲಿನ ಸಂಘರ್ಷ ಮತ್ತು ಅದರಲ್ಲಿನ ಅವನ ಅನುಭಾವವೆಂದೂ ಗುರುತಿಸುತ್ತಾರೆ. ಸ್ವಾಮೀಜಿ ವಿಶ್ವಧರ್ಮವನ್ನು ಹಿಂದೂಧರ್ಮ ಮೊದಲ್ಗೊಂಡು ಯಾವುದೇ ಒಂದು ನಿರ್ದಿಷ್ಟ ಧರ್ಮವೆಂದು ಗುರುತಿಸಲಿಲ್ಲವೆಂದು ನಾವು ನೆನಪಿಡಬೇಕು (ಆದರೆ ಅವರು ವಿಶ್ವದ ಎಲ್ಲ ಜನರಿಗೂ ಹಿಂದೂಧರ್ಮದ ಬಾಗಿಲುಗಳನ್ನು ಮುಕ್ತವಾಗಿರಿಸಿ, ಅದನ್ನು ಒಂದು ವಿಶ್ವಧರ್ಮವನ್ನಾಗಿಸಿದರು). ಅವರು ವಿಶ್ವಧರ್ಮವೆಂದು ಕರೆದಿದ್ದು ಮಾನವತೆಯಲ್ಲಕ್ಕೂ ಸಾಮಾನ್ಯವಾದ ಆಧ್ಯಾತ್ಮಿಕ ಪರಂಪರೆಯನ್ನು.

ಸ್ವಾಮಿ ವಿವೇಕಾನಂದರು ವಿಶ್ವಧರ್ಮದ ಬಗ್ಗೆ ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಇದೇ ಸಮಯದಲ್ಲಿ, ತುಲನಾತ್ಮಕ ಧಾರ್ಮಿಕ ಅಧ್ಯಯನದ ಮೊಟ್ಟಮೊದಲ ಪ್ರವರ್ತಕರಾದ ಪ್ರೊ. ಮ್ಯಾಕ್ಸ್ ಮುಲ್ಲರ್ ಅವರು ಹೀಗೆ ಬರೆದರು: "ಧರ್ಮದ ಜೀವಂತ ಸತ್ವವನ್ನು ಎಲ್ಲ ಮತಗಳಲ್ಲಿಯೂ ಕಾಣಬಹುದು ಎಂದು ನಾನು ನಂಬುತ್ತೇನೆ. ಅವುಗಳಲ್ಲಿರುವ ಜೊಳ್ಳಿನಲ್ಲಿ ವೈವಿಧ್ಯತೆ ಇರಬಹುದು ಮತ್ತು ಅದು ಏನು ಎನ್ನುವುದನ್ನು ಚಿಂತಿಸಿ ನೋಡಿ! ಎಲ್ಲ ಧರ್ಮಗಳ ಮೇಲೆ, ಕೆಳಗೆ ಮತ್ತು ಹಿಂದೆ ಒಂದು ನಿತ್ಯ ಮತ್ತು ವಿಶ್ವಾತ್ಮಕವಾದ ಧರ್ಮವಿದೆ."

ಈ ಬಗೆಯ ಭಾವನೆಯನ್ನೇ ಕೆಲವು ವರ್ಷಗಳ ಬಳಿಕ ಎ.ಎನ್. ವೈಟ್‌ಹೆಡ್ ಅವರು ವ್ಯಕ್ತಪಡಿಸಿದರು. ಅವರು ಆಧುನಿಕ ಜಗತ್ತಿನ ಉತ್ಕೃಷ್ಟ ಚಿಂತಕರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದಾರೆ. ತಮ್ಮ Religion in the Making ಎನ್ನುವ ಪುಸ್ತಕದಲ್ಲಿ ಅವರು ಹೀಗೆ ಬರೆಯುತ್ತಾರೆ:

> "ಮಹಾನ್ ವೈಚಾರಿಕ ಧರ್ಮಗಳೆಲ್ಲವೂ ಧಾರ್ಮಿಕ ಪ್ರಜ್ಞೆಯ ಉಗಮದಿಂದಾಗಿಯೇ ಹುಟ್ಟಿದವುಗಳು. ಆ ಪ್ರಜ್ಞೆ ಬುಡಕಟ್ಟು ಅಥವಾ ಸಾಮಾಜಿಕ ಪ್ರಜ್ಞೆಗಳಿಗಿಂತ ಭಿನ್ನವಾಗಿ, ವಿಶ್ವವ್ಯಾಪಕವಾದುದು, ವಿಶ್ವಾತ್ಮಕವಾದುದರಿಂದ, ಅದು ಏಕಾಂತತೆಯನ್ನು ಪರಿಚಯಿಸುತ್ತದೆ. ಒಬ್ಬ ವ್ಯಕ್ತಿಯು ತನ್ನ ಏಕಾಂತತೆಯಲ್ಲಿ ಇರುವುದೇ(ತನ್ಮಯತೆಯೇ) ಧರ್ಮವೆನಿಸಿಕೊಳ್ಳುತ್ತದೆ."[೪]

### ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಎರಡನೆಯ ತತ್ತ್ವ

ಸ್ವಾಮಿ ವಿವೇಕಾನಂದರ ಎರಡನೆಯ ಕಲ್ಪನೆ ಎಂದರೆ, ವಿಶ್ವಧರ್ಮವು ಈಗ ಅಸ್ತಿತ್ವದಲ್ಲಿರುವ ಜಾಗತಿಕ ಧರ್ಮಗಳೆಲ್ಲದರ ಸಮಗ್ರತೆ ಎಂಬುದು. ವಿಶ್ವಧರ್ಮದ ಬಗೆಗಿನ ಅವರ ಮೊದಲ ಕಲ್ಪನೆಯು ಅದು ಒಂದು ಪ್ರತ್ಯೇಕವಾದ, ಅಮೂರ್ತ ಆಧ್ಯಾತ್ಮಿಕ ಸಂಗತಿ ಎಂಬುದಾಗಿದ್ದರೆ, ಈ ಎರಡನೆಯ ಕಲ್ಪನೆಯು ಎಲ್ಲ ಧರ್ಮಗಳೂ ಅಸ್ತಿತ್ವದಲ್ಲಿದ್ದುಕೊಂಡು, ಪರಸ್ಪರ ಹೊಂದಾಣಿಕೆಯಿಂದ ಒಂದು ರೀತಿಯ ಒಕ್ಕೂಟ ರಚನೆಯಾಗುವುದೇ ವಿಶ್ವಧರ್ಮ ಎಂದು ಸೂಚಿಸುತ್ತದೆ. ಈ ಕಲ್ಪನೆ ವಿಶ್ವಸಂಸ್ಥೆಯಿದ್ದಂತೆ. ಅದು ಈಗಾಗಲೇ ಇರುವುದೇ ಆಗಿದೆ. ಅಮೆರಿಕದ ಪ್ಯಾಸಡೆನಾದಲ್ಲಿ ಮಾಡಿದ 'ವಿಶ್ವಧರ್ಮ ಸಾಕ್ಷಾತ್ಕಾರಕ್ಕೆ ಮಾರ್ಗ' ಎಂಬ ಪ್ರವಚನದಲ್ಲಿ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

"ಪ್ರತಿಯೊಂದು ದೇಶದಲ್ಲಿಯೂ ತಾತ್ತ್ವಿಕರು ಮತ್ತು ಇತರರು ಕಲ್ಪಿಸಿಕೊಂಡ ವಿಶ್ವಧರ್ಮ ಆಗಲೆ ಇದೆ... ಪಾದ್ರಿಗಳೇ ಮೊದಲಾದವರು ಕೆಲವು ಕ್ಷಣಗಳ ಕಾಲ ಮೌನವಾಗಿದ್ದರೆ. ಆಗ ವಿಶ್ವಧರ್ಮವಿರುವುದು ನಮಗೆ ಗೋಚರವಾಗುವುದು. ಅವರು ಯಾವಾಗಲೂ ಅದನ್ನು ಕೆಡಿಸುತ್ತಿರುವರು. ಏಕೆಂದರೆ. ಇದರಿಂದ ಅವರಿಗೆ ಪ್ರಯೋಜನ ವುಂಟು."[೩]

ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಕಲ್ಪನೆಗೆ ಆಧಾರಭೂತವಾದ ಮೂಲಭೂತ ನಿಯಮಗಳು ಯಾವುವು?

೧. ಮೊದಲ ನಿಯಮವೆಂದರೆ, ಪ್ರತಿಯೊಂದು ಧರ್ಮದ ವಿಶಿಷ್ಟ ಲಕ್ಷಣಗಳನ್ನು ಮತ್ತು ಅವುಗಳು ತಮ್ಮ ವೈಯಕ್ತಿಕತೆಯನ್ನು ಉಳಿಸಿ ಕೊಳ್ಳುವ ಹಕ್ಕನ್ನು ಗುರುತಿಸಿ ಗೌರವಿಸುವುದು. ಸ್ವಾಮಿ ವಿವೇಕಾನಂದರ ಪ್ರಕಾರ, ವಿಶ್ವಧರ್ಮವನ್ನು ಸಾಕಾರಗೊಳಿಸುವ ಹಿಂದಿನ ಪ್ರಯತ್ನಗಳು ಸಫಲವಾಗದಿರುವುದಕ್ಕೆ ಕಾರಣ, ಅಂತಹ ಒಕ್ಕೂಟದಲ್ಲಿ ತಮ್ಮ ವೈಯಕ್ತಿಕತೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವಂತೆ. ಅವುಗಳನ್ನು ಒಟ್ಟುಗೂಡಿಸಬಹುದಾದ ಪ್ರಾಯೋಗಿಕ ಮಾರ್ಗವನ್ನು ಆ ಪ್ರಯತ್ನಗಳು ವ್ಯಕ್ತಪಡಿಸದಿರುವುದೇ ಆಗಿದೆ. ವಿಶ್ವಧರ್ಮವೆಂದರೆ ಪ್ರಪಂಚದ ಎಲ್ಲ ಧರ್ಮಗಳೂ ಬೆಸುಗೆಗೊಂಡು ಮಿಶ್ರವಾಗುವುದಲ್ಲ. ಅದು ಬಗೆಬಗೆಯ ಪುಷ್ಪಗಳಿರುವ ಉದ್ಯಾನವನದಂತೆ; ಪ್ರತಿಯೊಂದು ಧರ್ಮವೂ ತನ್ನದೇ ಆದ ವಿಶಿಷ್ಟ ಗುಣಗಳನ್ನು ಉಳಿಸಿಕೊಳ್ಳುತ್ತದೆ. ಅದೇ ಸಮಯದಲ್ಲಿ ಅವೆಲ್ಲವೂ ಒಟ್ಟುಗೂಡಿ, ಒಂದು ಬಗೆಯ ಒಕ್ಕೂಟವಾಗಿ ಮಾರ್ಪಡು ತ್ತದೆ.

೨. ಎರಡನೆಯ ನಿಯಮವೆಂದರೆ, ಧರ್ಮಗಳು ಪರಸ್ಪರ ವಿರೋಧಿ ಗಳಲ್ಲ, ಅದಕ್ಕೆ ಬದಲಾಗಿ ಪೂರಕವಾದವುಗಳು ಎಂಬ ತಥ್ಯವನ್ನು ಮಾನ್ಯ ಮಾಡುವುದು. ಪ್ರತಿಯೊಂದು ಧರ್ಮವೂ ಕೆಲವು ಒಳ್ಳೆಯ ಅಂಶಗಳನ್ನೂ ಮತ್ತೆ ಕೆಲವು ಲೋಪದೋಷಗಳನ್ನೂ ಹೊಂದಿದೆ. ಆದರೆ, ಅವುಗಳನ್ನು ವಿಶ್ವಧರ್ಮದ ಅಡಿಯಲ್ಲಿ ಒಟ್ಟುಗೂಡಿಸಿದಾಗ, ಆ ಲೋಪದೋಷಗಳು ಮರೆಯಾಗುತ್ತವೆ. ಪ್ರತಿಯೊಂದು ಧರ್ಮವೂ ಈ ಜಗತ್ತಿನಲ್ಲಿ ಒಂದು ಪಾತ್ರವನ್ನು ವಹಿಸಬೇಕಾಗಿದೆ. ಹಾಗೆಂದೇ, ಎಲ್ಲ ಧರ್ಮಗಳೂ ನಮಗೆ ಅವಶ್ಯಕವೇ ಆಗಿವೆ. ಇದರ ಸಂಬಂಧ ವಾಗಿ ಸ್ವಾಮೀಜಿ ಹೀಗೆ ಹೇಳುತ್ತಾರೆ:

> "...ಈ ಧರ್ಮಗಳು ಪರಸ್ಪರ ವಿರೋಧಿಗಳಲ್ಲ, ಪೂರಕಗಳು ಎಂದು ನಾನು ನಂಬುತ್ತೇನೆ. ಪ್ರತಿಯೊಂದು ಧರ್ಮವೂ ವಿಶ್ವಸತ್ಯದ ಒಂದು ಅಂಶವನ್ನು ತೆಗೆದುಕೊಂಡು ಅದನ್ನು ವಿವರಿಸಿ ಅನುಷ್ಠಾನಕ್ಕೆ ತರಲು ತನ್ನ ಶಕ್ತಿಯನ್ನೆಲ್ಲ ವಿನಿಯೋಗಿಸುವುದು. ಆದಕಾರಣ ಇದರಿಂದ ಲಾಭವೆ ಹೊರತು ನಷ್ಟವಲ್ಲ. ಇದೇ ನನ್ನ ಭಾವನೆ..... ವಿಭಿನ್ನ ಧರ್ಮಗಳೆಲ್ಲ ಭಗವಂತನ ಶಕ್ತಿಯೇ ಆಗಿದ್ದು, ಅವು ಮಾನವ ಕಲ್ಯಾಣಕ್ಕಾಗಿ ಕೆಲಸ ಮಾಡುತ್ತವೆ ಎಂಬುದು ನನ್ನ ಭಾವನೆ."[೬]

೩. ಮೂರನೆಯ ನಿಯಮವು ಸಕ್ರಿಯಾತ್ಮಕವಾದುದು. ಒಟ್ಟು ಜಗತ್ತಿನ ಕಲ್ಯಾಣಕ್ಕಾಗಿ, ಎಲ್ಲ ಧರ್ಮಗಳೂ ಮುಕ್ತವಾಗಿ ಪರಸ್ಪರ ಬೆರೆಯಬೇಕು ಎಂಬ ಕಲ್ಪನೆಯನ್ನು ಅದು ನಮ್ಮ ಮುಂದೆ ಇಡುತ್ತದೆ. ಆಧುನಿಕ ಯುಗದ ಪರಿಭಾಷೆಯಲ್ಲಿ ಹೇಳುವುದಾದರೆ, ಈ ಬಗೆಯ ಬೆರೆಯುವಿಕೆ ಯನ್ನು ನಾವು 'ಸಂವಾದ' ಎಂದು ಕರೆಯುತ್ತೇವೆ. ಇದರ ತಾತ್ಪರ್ಯ, ವಿಶ್ವಧರ್ಮವೆಂದರೆ, ಒಂದು ರೀತಿಯ ಶಾಶ್ವತ ದುಂಡು ಮೇಜಿನ ಸಮಾವೇಶ; ನಿರಂತರವಾಗಿ ನಡೆಯುವ ಅಂತರ್ಧಾರ್ಮಿಕ ಸಂವಾದ ಅಥವಾ ವಿವಿಧ ಧರ್ಮಗಳ ಅನುಯಾಯಿಗಳ ನಡುವೆ ನಡೆಯ ಬೇಕಾದ ಮುಕ್ತಭಾವನೆಗಳ ಹಂಚಿಕೆ. ಈ ವಿಷಯದಲ್ಲಿ ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

> ಇಂದಿನ ಮನೋವಿಜ್ಞಾನದ ಪ್ರಕಾರ, ವೈವಿಧ್ಯತೆ ವಿಭಿನ್ನತೆ ಗಳಿಂದಾಗಿಯೇ ಬದುಕು ಸಹ್ಯವೆನಿಸುವುದು ಹಾಗೂ ಅನುಭವ ಅರಿವುಗಳ ಸಿರಿಸಂಪಾದನೆಗೆ ಕಾರಣವಾಗುವುದೇ ಹೊರತು, ಸಾದೃಶ್ಯಗಳ ಏಕತಾನತೆಯಿಂದಲ್ಲ. ಸ್ವಾಮಿ ವಿವೇಕಾನಂದರು ಹೇಳಿದಂತೆ, ವೈವಿಧ್ಯತೆಯಲ್ಲಿ ಏಕತೆಯನ್ನು ಆವಿಷ್ಕರಿಸುವುದು ನಮ್ಮ ಗುರಿಯಾಗಬೇಕು. ಇಂದಿನ ಪ್ರಪಂಚ ಮುನ್ನಡೆಯುತ್ತಿರುವ ರೀತಿಯಲ್ಲಿ ಮಾನವ ಸಂಪೂರ್ಣ ಸ್ವತಂತ್ರವಾಗಿ ಬದುಕುವುದು ಸಾಧ್ಯವಿಲ್ಲ; ವಿಭಿನ್ನ ನಂಬಿಕೆ ಶ್ರದ್ಧೆಗಳ ಜನರು ನಿತ್ಯವೂ ಪರಸ್ಪರರಿಗೆ ಬೇಕಾಗುತ್ತಾರೆ. ಆದ್ದರಿಂದ, ಇಡಿಯ ಮಾನವ ಜನಾಂಗವೇ ಒಂದಾಗಬೇಕು... ಮುಂಬರುವ ಇಡೀ ಪ್ರಪಂಚವೇ ಒಂದು ಸಮಾಜ, ಅದಕ್ಕೆ ಸಲ್ಲುವುದು ಒಂದೇ ವಿಶ್ವಧರ್ಮ, ಇರುವ ಧರ್ಮ ಗಳೆಲ್ಲ ಅದರ ಬೇರಿನ ಶಾಖೋಪಶಾಖೆಗಳು ಎಂಬ ಭವ್ಯವಾದ ಕನಸನ್ನು ಹಂಚಿಕೊಳ್ಳುವಂತೆ ಆಗಬೇಕು. —ಹಸ್ಟನ್ ಸ್ಮಿತ್

> "ಹಿಂದೆ ಇದ್ದ ಧರ್ಮಗಳನ್ನೆಲ್ಲಾ ಸ್ವೀಕರಿಸುತ್ತೇನೆ. ಅವರೊಂದಿಗೆ ನಾನೂ ಪೂಜಿಸುತ್ತೇನೆ. ಅವರು ಯಾವ ರೀತಿ ದೇವರನ್ನು ಆರಾಧಿಸಿದರೆ ನಾನೂ ಅದೇ ರೀತಿಯಲ್ಲಿ ಅವನನ್ನು ಆರಾಧಿಸುತ್ತೇನೆ. ನಾನು ಮಹಮ್ಮದೀಯರ ಮಸೀದಿಗೆ ಹೋಗುತ್ತೇನೆ. ಕ್ರೈಸ್ತರ ಚರ್ಚಿನಲ್ಲಿ ಶಿಲುಬೆಯ ಎದುರಿಗೆ ಬಾಗುತ್ತೇನೆ. ಬೌದ್ಧರ ವಿಹಾರಕ್ಕೆ ಹೋಗಿ ಬುದ್ಧನಲ್ಲಿ ಮತ್ತು ಅವನ ಧರ್ಮಕ್ಕೆ ಶರಣಾಗುತ್ತೇನೆ. ಹಿಂದೂ ಗಳೊಂದಿಗೆ ಕಾಡಿಗೆ ಹೋಗಿ ಎಲ್ಲರಲ್ಲೂ ಬೆಳಗುತ್ತಿರುವ ಆ ಪರಂಜ್ಯೋತಿಯ ದರ್ಶನಕ್ಕಾಗಿ ಧ್ಯಾನ ಮಾಡುವವರೊಂದಿಗೆ ನಾನು ಧ್ಯಾನಮಗ್ನನಾಗುತ್ತೇನೆ. ನಾನು ಇವನ್ನೆಲ್ಲ ಮಾಡುವುದು ಮಾತ್ರವಲ್ಲ, ಭವಿಷ್ಯದಲ್ಲಿ ಏನೇನು ಬರುವುದೋ ಅದನ್ನೆಲ್ಲ ಸ್ವೀಕರಿಸುವುದಕ್ಕೆ ನನ್ನ ಹೃದಯವನ್ನು ತೆರೆದಿರುವೆನು."[೭]

ಈ ಆಧುನಿಕ ಯುಗದ ಮಹಾನ್ ದಾರ್ಶನಿಕರೂ, ಚಿಂತಕರೂ ಮತ್ತು ಅಧ್ಯಾತ್ಮ ವಿದ್ಯೆಯ ಆಚಾರ್ಯಪುರುಷರೂ ಆದಂಥವರು ಆಡಿದ ಈ ಮಾತುಗಳು ಮುಂಬರುವ ಶತಮಾನಗಳಲ್ಲಿ, ಕಾಲದ ಆವರಣಗಳನ್ನು ಪ್ರತಿಧ್ವನಿಸುವುದರಲ್ಲಿ ಸಂದೇಹವಿಲ್ಲ. ಸ್ವಾಮಿ ವಿವೇಕಾನಂದರ ವಿಶ್ವಧರ್ಮದ ಬಗೆಗಿನ ಈ ದರ್ಶನ ಅದರಲ್ಲೂ ಈಗ ತಾನೇ ಪ್ರಸ್ತಾಪ ಮಾಡಿದ ಅವರ ಎರಡನೆಯ ನಿಯಮವನ್ನು ವ್ಯಾಪಕವಾಗಿ ಹೆಚ್ಚು ಹೆಚ್ಚು ಜನರು ಅರ್ಥಮಾಡಿಕೊಳ್ಳಲಿ ಮತ್ತು ಅನುಷ್ಠಾನಕ್ಕೆ ತರಲಿ ಎಂದು ಆಶಿಸುತ್ತೇವೆ. (ಮುಂದುವರಿಯುವುದು)

**ಆಕರಗಳು**


೧. ವಿವೇಕಾನಂದರ ಕೃತಿಶ್ರೇಣಿ, ೧: ೨೫
೨ ಕೃಶ್ರೇ. ೭:೨೨೩
೩. ಕೃಶ್ರೇ. ೭:೧೪೨
೪. AN Whitehead, *Religion in the making* ( Cambridge University Press, 1926) p.30
೫. ಕೃಶ್ರೇ. ೨:೨೧೦
೬. ಕೃಶ್ರೇ. ೨:೨೦೮-೨೦೯
೭. ಕೃಶ್ರೇ. ೨:೨೧೬